ಆದರೆ ಸದ್ಯಕ್ಕೆ ನಾವು ಪಾರ್ಲಿಮೆಂಟರಿ ಸಿಸ್ಟಮ್ ಅಂದರೆ ಇನ್‌ಡೈರೆಕ್ಟ್ ಆಗಿ ಯಾರು ಆರಿಸಿ ಬಂದಿರುತ್ತಾರೆ, ಅವರೇ ಅಧ್ಯಕ್ಷರನ್ನು ಆರಿಸಬೇಕೆನ್ನುವ ವಿಚಾರವೇನಿದೆ, ಆ ವಿಚಾರದ ತೀರ್ಮಾನಕ್ಕೆ ಮುಖ್ಯಮಂತ್ರಿಗಳು ಮತ್ತು ಕ್ಯಾಬಿನೆಟ್‌ನಲ್ಲಿರುವ ಎಲ್ಲಾ ಸಚಿವರು ಬಂದಿದ್ದಾರೆ. ಆ ಕಾರಣ, ಇದಕ್ಕೆ ಅಮೆಂಟ್‌ಮೆಂಟ್ ತರುವಂಥ ಅವಶ್ಯಕತೆ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನೊಂದು ತಿದ್ದುಪಡಿಯನ್ನು ಮೂವ್ ಮಾಡಬೇಕೆಂದಿದ್ದೇನೆ.

ಅಧ್ಯಕ್ಷರು : ಕೊನೇ ಹಂತದಲ್ಲಿ ತಾವು ತಿದ್ದುಪಡಿ ಕೊಟ್ಟರೆ ಹೇಗೆ ಮೂವ್ ಮಾಡುವುದಕ್ಕಾಗುತ್ತದೆ ?

ಶ್ರೀ ಬಿ.ಎಸ್.ಯಡಿಯೂರಪ್ಪ : ತಾವು ಅಪ್ಪಣೆ ಕೊಟ್ಟರೆ ಈ ತಿದ್ದುಪಡಿಯನ್ನು ಸೇರಿಸಿಕೊಳ್ಳಬಹುದು. ಅಲ್ಲದೆ, ಕೊನೇ ಹಂತದಲ್ಲಿ ತಿದ್ದುಪಡಿಗೆ ಅನುಮತಿ ಕೊಟ್ಟು ಅಂಗೀಕರಿಸಿದಂಥ ಅನೇಕ ಉದಾಹರಣೆಗಳಿವೆ. ಈ ತಿದ್ದುಪಡಿ ತುಂಬಾ ಮಹತ್ವರವಾಗಿದೆ. ತಿದ್ದಪಡಿ ಏನೆಂದರೆ, ಯಾರು ಐಎಎಸ್ ಅಧಿಕಾರಿಗಳಿರುತ್ತಾರೆ, ಇವರಿಗೆ ತತ್ಸಮಾನವಾಗಿ ಯಾರು ಕೆ.ಎ.ಎಸ್. ಅಧಿಕಾರಿಗಳಿದ್ದಾರೆ, ಈ ಮಸೂದೆ ತಂದರೆ ಇವರ ಕೆಲಸ ಮಾಡುತ್ತಿರುವವರು ಅವರಾಗುತ್ತಾರೆ. ಆದರೆ, ಇವ್ರೊತ್ತು ಚೀಫ್ ಎಕ್ಸಿಕ್ಯೂಟೀವ್ ಆಫೀಸರ್ ಆಗುವುದಕ್ಕೆ ಅಲ್ಲಿ ಅವಕಾಶ ಇಲ್ಲದಿರುವಂಥ ಒಂದು ಸಂದರ್ಭವಿದೆ. ಅದಕ್ಕೋಸ್ಕರ, ನಾನು ತಂದಿರುವ ತಿದ್ದುಪಡಿಯಲ್ಲಿ ಅವರಿಗೂ ಶೇಕಡಾ 50ರಷ್ಟು ಅವಕಾಶ ಕಲ್ಪಿಸಿಕೊಡಬೇಕು. ಬಹುಶಃ ಸನ್ಮಾನ್ಯ ಸಚಿವರು ಚೀಫ್ ಎಕ್ಸಿಕ್ಯೂಟೀವ್ ಆಫೀಸರ್ ಅನ್ನು ಮಾಡಿದಂಥ ಸಂದರ್ಭದಲ್ಲಿ ಬಂದಿರುವಂಥ ಅವಕಾಶವನ್ನು ಕೇವಲ ಐಎಎಸ್ ಅದಿಕಾರಿಗಳಿಗೆ ಮಾತ್ರ ಸಿಗುತ್ತಿದೆ. ಇವರಿಗೆ ತತ್ಸಮಾನವಾಗಿ ಯಾರು ಕೆಎಎಸ್ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ, ಇವರಿಗೆ ಅವಕಾಶ ಸಿಗುತ್ತಿಲ್ಲ. ಅದ್ದರಿಂದ ಅವರಿಗೂ ಶೇಕಡಾ 50 ರಷ್ಟು ಅವಕಾಶ ಸಿಗಬೇಕೆನ್ನುವ ಒಂದು ಸರಳ ತಿದ್ದುಪಡಿ ಇದು ಅಷ್ಟೆ, ಅದನ್ನು ತಾತ್ಕಿಕವಾಗಿ ನೀವು ಒಪ್ಪಿಕೊಳ್ಳುತ್ತೀರೆಂದು ನಾನು ಅಂದುಕೊಂಡಿದ್ದೇನೆ.

6.50 ಪಿ.ಎಂ

ಶ್ರೀ ಎಂ.ವೈ.ಘೋರ್ಪಡೆ : ತಾವು ಬೆಳಗ್ಗೆ ಇಲ್ಲಿ ಇದ್ದಿರೋ ಅಥವಾ ಇರಲಿಲ್ಲಮೋ ನನಗೆ ಗೊತ್ತಿಲ್ಲ, ಮಾನ್ಯ ರಂಗನಾಥರವರು ಇದಕ್ಕೆ ಅಂಥ ತಿದ್ದುಪಡಿಯನ್ನು ತರಲು ಬರುವುದಿಲ್ಲವೆಂದು ಹೇಳಿದರು. ಆ ರೀತಿ ಏನಾದರೂ ತಿದ್ದುಪಡಿಯನ್ನು ತರಬೇಕಾದರೆ ಎಷ್ಟರಮಟ್ಟಿಗೆ ಅದನ್ನು ಬದಲಾವಣೆ ಮಾಡಲು ಅವಕಾಶವಿದೆಯೋ ಅಷ್ಟರ ಮಟ್ಟಿಗೆ ಮಾಡಬಹುದು. ಆದರೆ ಕಾನೂನಿನಲ್ಲಂತೂ ಇದನ್ನು ಸೇರಿಸುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್ ಯಡಿಯೂರಪ್ಪ : ಇದನ್ನು ಗಮನದಲ್ಲಿಟ್ಟುಕೊಳ್ಳಲು ಪ್ರಯತ್ನಪಡುತ್ತೀರಾ?

ಶ್ರೀ ಎಂ.ವೈ.ಘೋರ್ಪಡೆ : ಅದನ್ನು ಬೇಕಾದರೆ ಮಾಡೋಣ.

ಶ್ರೀ ಆರ್.ವಿ.ದೇಶಪಾಂಡೆ : ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ವಿಕೇಂದ್ರೀಕರಣ ಮಾಡುತ್ತೀವೆಂದು ಹೇಳಿ ಕೇಂದ್ರೀಕರಣವನ್ನು ಮಾಡುಮದಕ್ಕೆ